(ಎ) ಹೊನ್ನಾವರ ತಾಲ್ಲೂಕಿನ ಮಾಗೋಡ ಮಂಡಲ ಪಂಚಾಯಿತಿ ಚುನಾವಣಾಧಿಕಾರಿ ಕಚೇರಿಯಲ್ಲಿ ನಡೆದ ಘಟನೆ ಬಗ್ಗೆ

† ಶ್ರೀ ಆರ್. ಎನ್. ನಾಯಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲ್ಲೂಕಿನಲ್ಲಿ ಮಾಗೋಡ ಮಂಡಳ ಪಂಚಾಯಿತಿಯ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ ೯-೧-೮೯೭೭ ರಂದು ನಡೆದ ಘಟನೆಯ ಬಗ್ಗೆ ಮಾನ್ಯ ಗೃಹಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಯ ಬಗ್ಗೆ ಈ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ದಿನಾಂಕ ೯-೧-೮೯೭೭ರ ಸಾಯಂಕಾಲ ೪ ಘಂಟೆಗೆ ಹೊನ್ನಾವರ ತಾಲ್ಲೂಕಿನ ಮಾಗೋಡ್ ಮಂಡಲ ಪಂಚಾಯ್ತಿ ಚುನಾವಣಾಧಿಕಾರಿಯ ಕಚೇರಿಯಲ್ಲಿ ನಡೆದ ದೌರ್ಜನ್ಯದ ಬಗ್ಗೆ ಯಾವುದೇ ಪ್ರಕರಣವನ್ನು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ನೋಂದಾಯಿಸಿಕೊಂಡಿರುವುದಿಲ್ಲ. ಈ ವಿಷಯದಲ್ಲಿ ಬಂದ ಅರ್ಜಿಯನ್ನು ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಅವರಿಗೆ ವಿಚಾರಣೆಗಾಗಿ ೧೬-೧-೮೭ ರಂದು ಕಳುಹಿಸಲಾಗಿದೆ. ಈ ಪ್ರಕರಣ ಇನ್ನೂ ವಿಚಾರಣೆಯಲ್ಲಿದೆ. ಇತ್ತೀಚಿನ ವರದಿಯಂತೆ ದಿನಾಂಕ ೨೯-೧-೮೭ ರಂದು ವಿಚಾರಣೆ ನಡೆಸಲಾಯಿತು. ಇದರ ಪ್ರಕಾರ ಆಪಾದಿಸಿದಂತೆ ಯಾವುದೇ ರೀತಿಯ ದೌರ್ಜನ್ಯ ನಡೆದಿಲ್ಲ ಅಥವಾ ಯಾವುದೇ ತರಹದ ಬೆದರಿಕೆಯನ್ನು ಸಹ ಹಾಕಿಲ್ಲ. ಹೊನ್ನಾವರದಲ್ಲಿ ಈಗ ಪರಿಸ್ಥಿತಿಯು ಶಾಂತವಾಗಿದೆ.

ಅಧ್ಯಕ್ಷರೇ, ಈ ಚುನಾವಣೆಯಲ್ಲಿ ಇಬ್ಬರು ಅಭ್ಯರ್ಥಿಗಳಿಗೆ ಒಂದೇ ಸಮನಾಗಿ ವೋಟು ಬಂದುದರಿಂದ ಅದನ್ನು ಲಾಟರಿ ಮೂಲಕ ನಿರ್ಧರಿಸಲಾಯಿತು. ಈ ಒಂದು ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿ ಚುನಾಯಿತರಾಗಿದ್ದಾರೆ ಎಂದು ಘೋಷಣೆ ಮಾಡಿದ ಮೇಲೆ ಜಾಸ್ತಿ ಕೂಗಾಡಿಕೊಂಡು ಬಂದರೇ ವಿನಃ ಅಲ್ಲಿ ಯಾವ ದೌರ್ಜನ್ಯ ಅಧಿಕಾರಿಗಳಿಂದ ಆಗಿಲ್ಲ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ, ವೈಯಕ್ತಿಕವಾಗಿ ಆಪಾದನೆ ಮಾಡಿದ್ದಾರೆ, ಆದುದರಿಂದ ನನಗೆ ಸ್ವಲ್ಪ ಕಾಲಾವಕಾಶ ಕೊಡಬೇಕು.

ಅಧ್ಯಕ್ಷರು.—ಅವಕಾಶ ಇಲ್ಲ. ಕ್ಲಾರಿಫಿಕೇಷನ್ ಮಾತ್ರ ಕೇಳಿ, ಅವಕಾಶ ಮಧ್ಯಾಹ್ನ ಭಾಷಣ ಮಾಡುವಾಗ ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—ಅಲ್ಲಿ ಏನಾಗಿದೆ ಎಂಬುದರ ಬಗ್ಗೆ ಗಮನ ಸೆಳೆದಿದ್ದಾರೆ. ಅಲ್ಲಿ ನಡೆದುದು ಏನು ಎಂದರೆ, ಚುನಾವಣಾಧಿಕಾರಿ ರಿಸಲ್ಟ್ ಅನೌನ್ಸ್ ಮಾಡಿದ ಸಂದರ್ಭದಲ್ಲಿ ಇದು ಆಗಿದೆ. ಇಬ್ಬರು ಅಭ್ಯರ್ಥಿಗಳಿಗೆ ಸಮಾನವಾಗಿ ಓಟುಗಳು ಬಂದುದರಿಂದ ಅದನ್ನು ಲಾಟರಿ ಎತ್ತಿದ್ದಾರೆ. ಇದೇ ರೀತಿಯಲ್ಲಿ ಎಲ್ಲಾಪುರ ತಾಲ್ಲೂಕಿನಲ್ಲಿ ಕೂಡಾ ಸಮಾನವಾಗಿ ಓಟುಗಳು ಬಂದುದರಿಂದ ಅಲ್ಲೂ ಲಾಟರಿ ಎತ್ತಿದಂಥ ಕಾಲದಲ್ಲಿ ಅಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಂದರು, ಇಲ್ಲಿ ಜನತಾದವರು ಬಂದರು.

ಅಧ್ಯಕ್ಷರು.—ಒಂದು ಕಡೆ ಜನತಾದವರು ಗಲಾಟೆ ಮಾಡಿದ್ದಾರೆ, ಇನ್ನೊಂದು ಕಡೆ ಕಾಂಗ್ರೆಸ್‌ನವರು ಗಲಾಟೆ ಮಾಡಿದ್ದಾರೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮಂತ್ರಿಗಳು ಕೊಡುವ ಉತ್ತರ ನೋಡಿದರೆ ಅವರಿಗೆ ಅಧಿಕಾರಿಗಳಿಂದ ಸರಿಯಾದ ಮಾಹಿತಿ ಸಿಕ್ಕಿಲ್ಲ ಎಂದು ಗೊತ್ತಾಗುತ್ತಿದೆ, ಅವರು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಚುನಾವಣೆ ನಡೆದು, ಮತಗಳ ಎಣಿಕೆ ಆದನಂತರ ನಡೆದ ವಿಚಾರ ಇವರು ಹೇಳುತ್ತಿದ್ದಾರೆ ನಾನು ಕೇಳಿರುವುದು ದಿನಾಂಕ ೯-೧-೮೯೭೭ ರಂದು ನಡೆದ ಘಟನೆ ಬಗ್ಗೆ. ನಿಮ್ಮ ಚುನಾವಣೆ ಯಾವಾಗ ಮುಗಿದಿದೆ ಎಂದರೆ ೨೧ನೇ ತಾರೀಖು ಆಗಿದೆ. ಆದರೆ ನಾನು ಕೇಳುತ್ತಿರುವುದು ೯-೧-೮೭ ರಂದು ನಡೆದ ವಿಚಾರ. ತಾವು ಉತ್ತರ ಏನು ಕೊಡುತ್ತಿದ್ದೀರಿ ?

ಅಧ್ಯಕ್ಷರು.—೯-೧-೮೭ ರಂದು ನಡೆದ ಘಟನೆ ಬಗ್ಗೆ ಹೇಳಿ ಎನ್ನುತ್ತಿದ್ದಾರೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಆರ್. ಎನ್. ನಾಯಕ್.—ಸ್ವಾಮಿ ಮಾನ್ಯ ಮಂತ್ರಿಗಳು ೯-೧-೧೯೮೭ ರಂದು ನಡೆದ ಘಟನೆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ೯-೧-೮೭ ರಂದು ನಡೆದ ಘಟನೆ ಬಗ್ಗೆ ಉತ್ತರ ಕೊಡಲಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಿಚಾರಣೆಯಲ್ಲಿದೆ ಎಂದು ಹೇಳಿದ್ದೇನೆ. ಮತ್ತೆ ದಿನಾಂಕ ೨೯-೧-೮೭ ರಂದು ವಿಚಾರಣೆ ನಡೆಸಲಾಯಿತು. ಇದರ ಪ್ರಕಾರ ಆಪಾದಿಸಿದಂತೆ ಯಾವುದೇ ರೀತಿಯ ದೌರ್ಜನ್ಯ ನಡೆದಿಲ್ಲ ಅಥವಾ ಯಾವುದೇ ತರಹ ಬೆದರಿಕೆಯನ್ನು ಸಹ ಹಾಕಿಲ್ಲವೆಂದು ಉತ್ತರ ಕೊಟ್ಟಿದ್ದೇನೆ.....

ಅಧ್ಯಕ್ಷರು.—ದಿನಾಂಕ ೯-೧-೮೭ರ ಸಾಯಂಕಾಲ ೪ ಗಂಟೆಗೆ ಹೊನ್ನಾವರ ತಾಲ್ಲೂಕಿನ ಮಾಗೋಡ ಮಂಡಳ ಪಂಚಾಯಿತಿ ಜನಾವಣಾಧಿಕಾರಿಯ ಕಚೇರಿಯಲ್ಲಿ ನಡೆದ ದೌರ್ಜನ್ಯದ ಬಗ್ಗೆ ಯಾವುದೇ ಪ್ರಕರಣವನ್ನು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ನೊಂದಾಯಿಸಿಕೊಂಡಿರುವುದಿಲ್ಲ. ಈ ವಿಷಯದಲ್ಲಿ ಬಂದ ಆರ್ಜಿಯನ್ನು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅವರಿಗೆ ವಿಚಾರಣೆಗಾಗಿ ದಿನಾಂಕ ೧೬-೧-೮೭ ರಂದು ಕಳುಹಿಸಲಾಗಿದೆ. ಈ ಪ್ರಕರಣವು ಇನ್ನೂ ವಿಚಾರಣೆಯಲ್ಲಿದೆ ಎಂದು ಹೇಳಿದ್ದಾರೆ.....

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಧ್ವನಿ ಈಗ ಬದಲಾಗಿದೆ. ೧೬-೧-೮೭ ರಂದು ವಿಚಾರಣೆಗೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ೨೧-೧-೮೭ರ ನಂತರ ನಡೆದ ಘಟನೆಬಗ್ಗೆ ಉತ್ತರ ಕೊಟ್ಟಿದ್ದಾರೆ. ಆದರೆ ನಾನು ಕೇಳುತ್ತಿರುವುದು ೯-೧-೮೭ ರಂದು ನಡೆದ ಘಟನೆ ಬಗ್ಗೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಇತ್ತೀಚಿನ ವರದಿಯಂತೆ ದಿನಾಂಕ ೨೯-೧-೮೭ ರಂದು ವಿಚಾರಣೆ ನಡೆಸಲಾಯಿತು. ಇದರ ಪ್ರಕಾರ ಆಪಾದಿಸಿದಂತೆ ಯಾವುದೇ ರೀತಿಯ ದೌರ್ಜನ್ಯ ನಡೆದಿಲ್ಲ. ಅಥವಾ ಯಾವುದೇ ರೀತಿಯ ಬೆದರಿಕೆಯನ್ನು ಸಹ ಹಾಕಿಲ್ಲ ಎಂದು ವರದಿ ಬಂದಿದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ೯-೧-೮೭ ರಂದು ಕೌಂಟಿಂಗ್‌ನಲ್ಲಿ ನಡೆದ ಘಟನೆ ಬಗ್ಗೆ.....

ಅಧ್ಯಕ್ಷರು.—ಬೇರೆ ಒಂದು ಪತ್ರ ಬರೆದು ಕಳುಹಿಸಿ ಕೊಡಿ.....

ಶ್ರೀ ಆರ್. ಎನ್. ನಾಯಕ್.—ಅದು ಹೇಗೆ ಸಾಧ್ಯವಾಗುತ್ತದೆ ಅಧ್ಯಕ್ಷರೇ ? ಮಾನ್ಯ ಮಂತ್ರಿಗಳು ತಪ್ಪು ಉತ್ತರ ಕೊಡುತ್ತಿದ್ದಾರೆ, ನಾನು ಕೇಳಿರುವ ಪ್ರಶ್ನೆ ದಿನಾಂಕ ೯-೧-೮೭ರ ಘಟನೆಗೆ ಸಂಬಂಧಪಟ್ಟಿದ್ದು. ಅವರು ಬೇರೆ ಯಾವುದೋ ಉತ್ತರ ಕೊಡುತ್ತಿದ್ದಾರೆ. ದಿನಾಂಕ ೯-೧-೮೭ ರಂದು ನಡೆದ ಘಟನೆ ಬಗ್ಗೆ ಪೋಲೀಸ್‌ರವರು ದೂರು ದಾಖಲು ಮಾಡಿಕೊಂಡಿಲ್ಲ. ಈ ಬಗ್ಗೆ ಮಾನ್ಯ ಗೃಹಸಚಿವರು ಅವರ ವಿರುದ್ಧ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದು ಬೇಕು

ಶ್ರೀ ಬಿ. ರಾಚಯ್ಯ.—ಈ ನೇ ತಾರೀಖು ನಡೆದಂಥ ಘಟನೆ ಬಗ್ಗೆ ಸಂಬಂಧಪಟ್ಟವರು ಫಿರ್ಯಾದು ಕೊಟ್ಟರಲ್ಲಿಲ್ಲವಾದ್ದರಿಂದ ಕೇಸ್ ರಿಜಿಸ್ಟರ್ ಆಗಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಕೇಸ್ ದಾಖಲಾಗಿಲ್ಲವೆಂದು ಹೇಳಿದರೆ ಹೇಗೆ? ಮಾನ್ಯ ಸಭಾಧ್ಯಕ್ಷರೇ, ಘಟನೆ ನಡೆದ ಮೇಲೆ ಫಿರ್ಯಾದುದಾರರು ಫಿರ್ಯಾದು ಕೊಟ್ಟಮೇಲೆ ಕೇಸ್ ದಾಖಲು ಆಗಿಲ್ಲ ಎಂದರೆ ಸರಿಯಲ್ಲ. ಕೇಸ್ ದಾಖಲು ಮಾಡಿಕೊಳ್ಳದೇ ಇರುವ ಪೋಲೀಸ್ ಅಧಿಕಾರಿಯ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕಂಪ್ಲೇಂಟ್ ಕೊಟ್ಟರೂ ಸಂಬಂಧಪಟ್ಟ ಸಬ್‌ಇನ್ಸ್‌ಪೆಕ್ಟರ್ ಕೇಸ್ ರಿಜಿಸ್ಟರ್ ಮಾಡಿಕೊಂಡಿಲ್ಲ. ಏಕೆಂದರೆ ಬೇರೆಯವರಿಗೆ ಅವರು ಪ್ರೊಟೆಕ್ಷನ್ ಕೊಡುವು ದಕ್ಕೋಸ್ಕರ ಕೇಸನ್ನು ರಿಜಿಸ್ಟರ್ ಮಾಡಿಕೊಂಡಿಲ್ಲ,

ಶ್ರೀ ಬಿ. ರಾಚಯ್ಯ.—ನಾನು ವಿಷಯವನ್ನು ಓದಿದ್ದೇನೆ. ೯ನೇ ತಾರೀಖು ನಡೆದ ಘಟನೆ ವಿಷಯದಲ್ಲಿ ಯಾವ ಕೇಸೂ ರಿಜಿಸ್ಟರ್ ಆಗಿಲ್ಲ,

(ಗೊಂದಲ)

ಶ್ರೀ ಬಿ. ರಾಚಯ್ಯ.—ಈ ವಿಷಯವೂ ಬಂದಿರಲಿಲ್ಲ. ನಿನ್ನೆ ಫೋನ್ ಮಾಡಿದ ಮೇಲೆ ಇದು ಬಂದಿದೆ. ಈ ವರದಿ ಪ್ರಕಾರ ಆ ದಿನ ಯಾವ ತರದ ಘಟನೆಯೂ ನಡೆದಿಲ್ಲವೆಂದು ಇದೆ.

(ಗೊಂದಲ)

ಶ್ರೀ ಕೆ.ಹೆಚ್. ಪಾಟೀಲ್.—ನಾವು ಅಧಿಕಾರದಲ್ಲಿದ್ದಾಗ ಅಧಿಕಾರಿಗಳು ತರಗುಟ್ಟಿ ನಡೆಯುತ್ತಿದ್ದರು. ಈಗ ಕಂಪ್ಲೇಂಟ್ ಕೊಟ್ಟರೂ ಕೇಸ್ ರಿಜಿಸ್ಟರ್ ಆಗಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು.—ಫಿರ್ಯಾದಿ ಕೊಟ್ಟಿಲ್ಲವಂತೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನೇ ಹೋಗಿ ಕೊಟ್ಟಿದ್ದೇನೆಂದು ಅವರು ಹೇಳುತ್ತಾರೆ.

ಶ್ರೀ ಆರ್.ಎನ್. ನಾಯಕ್.—ನಾನೇ ಹೋಗಿದ್ದೆ. ಅಲ್ಲಿ ಸುರೇಶ್ ನಾಯ್ಕ ಎನ್ನುವರು ಕಂಪ್ಲೇಂಟ್ ಕೊಟ್ಟರು. ೧೦ನೇ ತಾರೀಖು ಕಂಪ್ಲೇಂಟ್ ಕೊಟ್ಟರೂ ಕ್ರಮ ಏಕೆ ತೆಗೆದುಕೊಳ್ಳಲಿಲ್ಲ.

ಅಧ್ಯಕ್ಷರು.—ಸುಮ್ಮನೆ ಕೂಡ್ರಿ.

ಶ್ರೀ ಆರ್.ಎನ್. ನಾಯಕ್.—ನನಗೆ ಮಾತನಾಡುವುದಕ್ಕೆ ಬಿಡಿ. ಇದು ಕಾಗ್ನಿಸಬಲ್ ಗುನ್ನೆ. ನಾವು ಕಂಪ್ಲೇಂಟ್ ಕೊಟ್ಟಿದ್ದೇವೆ.

ಶ್ರೀ ಬಿ. ರಾಚಯ್ಯ.—ಸುರೇಶ ನಾಯಕ್ ಎನ್ನುವರು ಫಿರ್ಯಾದಿ ಕೊಟ್ಟಿದ್ದಾರೆ ಎಂದು ಹೇಳುತ್ತೀರಾ, ಆದಕ್ಕೆ ಪೋಲೀಸ್ ಸ್ಟೇಷನ್‌ನಲ್ಲಿ ಏನಾದರೂ ಅಕ್ನಾಲೆಜ್‌ಮೆಂಟ್ ಕೊಟ್ಟಿದ್ದಾರೆಯೇ? ಅದು ಇದ್ದರೆ ಕೊಡಿ ನಾನು ವಿಚಾರ ಮಾಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ದಿನಾಂಕ ೯-೧-೮೭ರಂದು ೪ ಗಂಟೆಗೆ ಚುನಾವಣಾ ಆಫೀಸ್‌ನಲ್ಲಿ ಗಲಾಟೆ ನಡೆಯಿತು. ಏಕೆ ಗಲಾಟೆ ನಡೆಯಿತು ಎಂದರೆ,

ಅಧ್ಯಕ್ಷರು,—ಬೇಗ ಕಾರಣ ಹೇಳ್ರಿ.

ಶ್ರೀ ಆರ್.ಎನ್. ನಾಯಕ್.—ಆ ದಿನ ೪ ಗಂಟೆಗೆ ಚಿಹ್ನೆ ಕೊಡುವ ವಿಚಾರದಲ್ಲಿ ಗಲಾಟೆ ನಡೆಯಿತು. ನಮ್ಮ ಕಡೆಯವರು 'ಬಿ' ಫಾರ್ಮನ್ನು ತುಂಬಿ ಮೂರುವರೆ ಗಂಟೆಗೆ ತೆಗೆದುಕೊಂಡು ಹೋದಾಗ ಆ ಕಡೆ ಪಾರ್ಟಿಯವರು ಅದನ್ನು ಕೊಡುವ ಬಗ್ಗೆ ಒಪ್ಪಿಕೊಳ್ಳಲಿಲ್ಲ. ಚುನಾವಣಾಧಿಕಾರಿಯವರು ಸಹ ಚಿಹ್ನೆಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆ ಸಂದರ್ಭದಲ್ಲಿ ಗಲಾಟೆ ಆಯಿತು. ಆಗ ಆ ಕಡೆಯವರು ಚುನಾವಣಾಧಿಕಾರಿಯವರ ಕಾಲರ್ ಹಿಡಿದು ಎಳೆದಾಡಿದರು. ಇದು ನಡೆದ್ದನ್ನು ನಾನು ಸ್ವತಃ ನೋಡಿದ್ದೇನೆ. ಆಮೇಲೆ ನಾನೇ ಅವರೆಲ್ಲರನ್ನೂ ಸಮಾಧಾನ ಮಾಡಿದೆ. ಆಮೇಲೆ ಆ ಕಡೆಯವರು ಈ ಅಧಿಕಾರಿಯನ್ನು ಕೊಚ್ಚಿ ಹೊಳೆಗೆ ಹಾಕುತ್ತೇವೆಂದು ಸುರೇಶ್‌ನಾಯಕರನ್ನು ಕೊಚ್ಚಿ ಕೊಚ್ಚಿ ಹೊಳೆಗೆ ಹಾಕುತ್ತೇವೆಂದು ಜೀವದ ಬೆದರಿಕೆ ಹಾಕಿದ್ದಾರೆ. ಇದು ಕಾಗ್ನಿಸಬಲ್ ಗುನ್ನೆ. ಜಗಳ ಆದಮೇಲೆ ಹೊನ್ನಾವರ ತಾಲ್ಲೂಕು ಪೋಲೀಸ್ ಸ್ಟೇಷನ್‌ನಲ್ಲಿ ಕಂಪ್ಲೇಂಟ್ ಕೊಟ್ಟರೂ ಯಾವ ಕ್ರಮವನ್ನೂ ಸಂಬಂಧಪಟ್ಟವರ ಮೇಲೆ ತೆಗೆದುಕೊಂಡಿಲ್ಲ. ಆಮೇಲೆ ಕಾರವಾರ ಎಸ್.ಪಿ.ಯವರಿಗೂ ಇದರ ಬಗ್ಗೆ ಬರೆದಿದ್ದೇವೆ. ಆದರೂ ಕ್ರಮ ತೆಗದುಕೊಳ್ಳಲಿಲ್ಲ

ಶ್ರೀ ಬಿ. ರಾಚಯ್ಯ.—ನೀವು ಕಾಲಿಂಗ್ ಅಟೆನ್‌ಷನ್‌ನಲ್ಲಿ ಇದನ್ನೆಲ್ಲಾ ತಿಳಿಸಿಲ್ಲವಲ್ಲ.

ಅಧ್ಯಕ್ಷರು.—ಮೊದಲೇ ಈ ರೀತಿಯಾಗಿ ಬರೆದಿದ್ದರೆ ಹೇಳುತ್ತಿದ್ದರು.

ಶ್ರೀ ಅಬ್ದುಲ್ ನಜೀರ್ ಸಾಬ್.—ಒಂದು ಕಾಲಿಂಗ್ ಅಟೆನ್‌ಷನ್ ಮೇಲೆ ಭಾಷಣ ಮಾಡತಕ್ಕ ನಿಯಮ ಎಲ್ಲಿ ಇದೆ?

೧-೩೦ ಪಿ.ಎಂ.

(ಗೊಂದಲ)

ಶ್ರೀ ಅಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೇ.....

ಅಧ್ಯಕ್ಷರು.—ವಿಷಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಯಮದ ಪ್ರಕಾರ ಮಾತನಾಡಬೇಕು. ...ಗಮನ ಸೆಳೆಯುವ ಸೂಚನೆಯಲ್ಲಿ ಭಾಷಣ ಮಾಡುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೇ, ನನ್ನ ವಿಚಾರಗಳನ್ನು ಹೇಳಲು ನನಗೆ ಅವಕಾಶ ಕೊಡಿ.....

ಅಧ್ಯಕ್ಷರು.—ನೀವು ಏನು ಹೇಳಿದ್ದೀರಿ ಅದನ್ನು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ.

ಶ್ರೀ ಆರ್.ಎನ್. ನಾಯಕ್.—ನಿಮ್ಮ ಅಧಿಕಾರಿಗಳು ಆ ದಿವಸ ಕೇಸ್ ರಿಜಿಸ್ಟರ್ ಮಾಡಿಕೊಳ್ಳದಿದ್ದುದಕ್ಕೆ ಕಾರಣ ಏನು? ಅಂತಹ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ?

(ಗೊಂದಲ)

ಅಧ್ಯಕ್ಷರು.—ನಾಯಕ್‌ರವರೇ ಇಲ್ಲಿ ಕೇಳಿ, ನಿಯಮದಲ್ಲಿ ಏನು ಹೇಳುತ್ತದೆ ಅಂದರೆ– ''ಹೇಳಿಕೆಯನ್ನು ಕೊಟ್ಟ ತರುವಾಯ ಅದೇ ಕಾಲದಲ್ಲಿ ಅದರ ಮೇಲೆ ಯಾವುದೇ ಚರ್ಚೆ ಮಾಡತಕ್ಕುದಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಗಳಲ್ಲಿ ವಿಷಯ ಯಾರ ಹೆಸರಿನಲ್ಲಿ ಇರುತ್ತದೋ ಆ ಪ್ರತಿಯೊಬ್ಬ ಸದಸ್ಯನೂ, ಅಧ್ಯಕ್ಷರ ಅನುಮತಿ ಪಡೆದು ಒಂದು ಪ್ರಶ್ನೆಯನ್ನು ಕೇಳಬಹುದು. ಅದಾಗ್ಯೂ ಕಾರ್ಯಕಲಾಪಗಳ ಪಟ್ಟಿಯಲ್ಲಿ ಐದು ಮಂದಿ ಸದಸ್ಯರಿಗಿಂತ ಹೆಚ್ಚು ಹೆಸರುಗಳನ್ನು ತೋರಿಸತಕ್ಕುದಲ್ಲ'' ಹೀಗೆ ನಿಯಮ ಇದೆ. ಆದುದರಿಂದ ಈಗ ಆ ವಿಷಯವನ್ನು ಮುಂಕ್ತಾಯ ಮಾಡಿ, ಮತ್ತೆ ರಾಜ್ಯಪಾಲರ ಭಾಷಣದ ಮೇಲೆ ತಾವುಗಳು ಮಾತನಾಡುವಾಗ ಪ್ರಸ್ತಾಪ ಮಾಡಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ಡೇಟ್‌ನಲ್ಲಿ ವ್ಯತ್ಯಾಸ ಇದೆ ಎಂದು ಅವರು ಹೇಳುತ್ತಿರುವುದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನನಗೆ ಬಂದಿರತಕ್ಕಂಥ ಸ್ಟೇಟ್‌ಮೆಂಟ್ ಪ್ರಕಾರ, ೧೦-೧-೮೭ರಂದು, 'A petition written by Sri Suresh Namayya Naik was registered by PSI, Honnavar and the same was entered in Section 22-8/7. However, a petition received in this connection in this office has been sent to PSI, Honnavar, for enquiry on 16-1-87. on 29-1-87 the matter was enquired and the Election Officer Sri Giridas was secured by PSI, Honnavar and recorded his statement. He said that the alleged persons have not assulted or abused or given threat of dire consequences. The situation in Honnavar is peaceful.

ಅಧ್ಯಕ್ಷರು.—ವಿಷಯ ಇಲ್ಲಿಗೆ ಮುಕ್ತಾಯವಾಯಿತು.

ಶ್ರೀ ಆರ್. ಎನ್. ನಾಯಕ್.—ಕಾಗ್ನಿಜೆಬಲ್ ಇದ್ದರೆ ಏಕೆ ಇಲ್ಲ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯಲ್ಲಿ.....

ಶ್ರೀ ಆರ್. ಎನ್. ನಾಯಕ್.—ನಾನು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಲಿಲ್ಲ. ಈ ವಿಚಾರದಲ್ಲಿ ತಾವುಗಳು ನಮ್ಮ ಸಹಾಯಕ್ಕೆ ಬರಬೇಕು.

ಅಧ್ಯಕ್ಷರು.—ಎರಡು ಸಲ ತಮಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರು ಹೇಳಿದ ಪ್ರಕಾರ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಿಬಿಡಿ.

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ.....

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಬೇಕು. ಈ ವಿಷಯ ಇಲ್ಲಿಗೆ ಮುಕ್ತಾಯವಾಯಿತು. ನಿಮಗೆ ನನ್ನ ಸಹಕಾರ ಬೇಕು ಅಂದರೆ ನೀವು ವಿಷಯವನ್ನು ಬರೆದು ನನಗೆ ಕಳುಹಿಸಿಕೊಡಿ. ನಾನು ಆ ಕುರಿತು ಸೂಕ್ತ ಕ್ರಮತೆಗೆದುಕೊಳ್ಳಿ ಎಂದು ಮಾನ್ಯ ಮಂತ್ರಿಯವರಿಗೆ ಬರೆದು ಕಳುಹಿಸುತ್ತೇನೆ. ಈಗ ವೆಂಕಟರಾಮಯ್ಯನವರ ಗಮನ ಸೆಳೆಯುವ ಸೂಚನೆ : ಇದನ್ನು ನಾಳೆ ತೆಗೆದುಕೊಳ್ಳೋಣ....

ಶ್ರೀ ಆರ್. ಎನ್. ನಾಯಕ್.—ಅಧ್ಯಕ್ಷರೇ.....

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನನ್ನನ್ನು ಸಂಬಿ ಎಂದು ಹೇಳುತ್ತಿದ್ದೇನೆ. ರಿಪೋರ್ಟ್‌ನಲ್ಲಿ ಇವರು ಹೇಳಿದಂಥ ರೀತಿಯಲ್ಲಿ ಇಲ್ಲ ವಿಚಾರಣೆ ಮಾಡಿಸುತ್ತೇನೆ.

ಅಧ್ಯಕ್ಷರು.—ನಾಯಕ್‌ರವರೇ ತಾವುಗಳು ಬರೆದು ಕೊಡಿ, ನೋಡೋಣ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನನ್ನ ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಪ್ರಕಾರ ಹೇಳಿಕೆ ಕೊಟ್ಟಿದ್ದೇನೆ. ಆವರಿಗೆ ಅಪನಂಬಿಕೆ ಆದರೆ ಬೇರೆ ರೀತಿಯಲ್ಲಿ ವಿಚಾರಣೆ ಮಾಡಿ ಕ್ರಮತೆಗೆದು ಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ನಿಯಮ ೩೩ಳಿರ ಮೇರೆಗೆ

(೧) ದ. ಕ. ಜಿಲ್ಲೆಯಲ್ಲಿ ಬೈಕಾಂಪಾಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ರಚನೆ

†ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯವರು ಮಂಗಳೂರಿನ ಬಳಿ ಬೈಕಂಪಾಡಿಯಲ್ಲಿ ರಚಿಸಲು ಬಹುವರ್ಷಗಳ ಹಿಂದೆ ಉದ್ದೇಶಿಸಲಾದ ಮಾರುಕಟ್ಟೆ ಯಾರ್ಡ್ ಇನ್ನೂ ನೆನೆಗುದಿಯಲ್ಲಿ ಬಿದ್ದಿದೆ. ಈ ಸಲುವಾಗಿ ಭೂಸ್ವಾಧೀನ ಮಾಡಿಕೊಂಡ ಜಾಗದಲ್ಲಿ ಸಪ ಯಾವುದೇ ರಚನಾ ಕಾರ್ಯ ನಡೆದಿಲ್ಲ. ಬದಲು ಕೆಲವು ಸ್ಥಳೀಯರಿಂದ ಪ್ರವೇಶ ನಡೆದಿದೆಯಾಗಿ ತಿಳಿದು ಬರುತ್ತದೆ. ವಿಶ್ವಬ್ಯಾಂಕಿನ ಕೋಟ್ಯಾಂತರ ರೂಪಾಯಿಗಳ ನೆರವಿನ ಯೋಜನೆಯಿದ್ದೂ ಈಗಿರುವ ಸ್ಥಿತಿಯಲ್ಲಿ ರೈತರಿಗೂ ವ್ಯಾಪಾರಿಗಳಿಗೂ ತ್ರಾಸದಾಯಕವಾದ ಮಾರುಕಟ್ಟೆಯ ಬದಲಿಗೆ ಬೈಕಂಪಾಡಿಯಲ್ಲಿ ಹೊಸ ಮಾರುಕಟ್ಟೆ ರಚಿಸಲು ಯಾವಾಗ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಸಚಿವರು).—ನಾವು ೮೫ ಎಕರೆ ೮೮ ಸೆಂಟ್ಸನ್ನು ಬೈಕಂಪಾಡಿ ಏರಿಯಾದಲ್ಲಿ ಅಕ್ವಿಜಿಷನ್ ಮಾಡಿಕೊಳ್ಳಬೇಕೆಂದು ಕೇಳಿದ್ದೇವೆ. ಈಗ ಪಾಸಕ್ಕೆಂದು ಸ್ವಲ್ಪ ಕೊಟ್ಟಿದ್ದಾರೆ. ಇನ್ನೂ ೭ ಎಕರೆ ೯೩ ಸೆಂಟ್ಸ್ ಬರಬೇಕಾಗಿದೆ. ಇದಕ್ಕೆ ಮೊದಲೇ ೨೨,೩೨,೦೦೦ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ತೊಂದರೆ ಏಕಾಯಿತೆಂದರೆ ಜಮೀನು ಬಂದಾಗ ಒಂದೇ ಸಲ ಬರಲಿಲ್ಲ. ಎನ್‌ಕ್ರೋಚ್‌ಮೆಂಟ್ ಬೇರೆ ಇದೆ. ರಸ್ತೆ ಭಾಗದಲ್ಲಿ ಇರುವಂಥ ವನ್ನು ತೆಗೆಸಿದ್ದೇವೆ. ಇನ್ನೂ ೪೭ ಮನೆಗಳನ್ನು ಮಧ್ಯದಿಂದ ತೆಗೆಸಿದ ಮೇಲೆ ಪ್ಲಾನು ಏಸ್ಟಿಮೇಟು ಮಾಡಿಸಬೇಕಾಗುತ್ತದೆ. ಈಗಾಗಲೇ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದೇವೆ. ನಿಧಾನ ವಾಗಿರುವುದು ನಿಜ, ಶೀಘ್ರವಾಗಿ ಮಾಡಿಸುತ್ತೇವೆ.

(೨) ಕೋಲಾರ ಜಿಲ್ಲೆಯಲ್ಲಿ ಹಿಂದಂಳಿದ ಹಾಗೂ ಅಲ್ಪಸಂಖ್ಯಾತರ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು ನಿಲ್ಲಿಸಿರುವುದು

†ಡಾ. ಬಿ ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ ಕೋಲಾರ ಜಿಲ್ಲೆಯಲ್ಲಿ ಕಳೆದ ಸಾಲಿನ ಅಂದರೆ ೧೯೮೬ನೇ ಸಾಲಿನ ಫೆಬ್ರವರಿ, ಡಿಸೆಂಬರ್, ದಸರಾ ರಜೆಯಲ್ಲಿ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ಕಾಲೇಜು ವಿದ್ಯಾರ್ಥಿ ನಿಲಯಗಳನ್ನು ವಿನಾಕಾರಣ ನಿಲ್ಲಿಸಿದ್ದರು, ಕಾರಣವೇನು ?

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.